

# ಆಮ್ಲೆಟ್ ಮಾಡಲು ಸಂಯುಕ್ತಾ ತಯಾರಿ

ನಟಿ ಸಂಯುಕ್ತಾ ಆಮ್ಲೆಟ್ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ! ಅರೆ, ಅವರು ಆಮ್ಲೆಟ್ ಮಾಡ್ಕೊಂಡ್ರೆ ಅವ್ರೇ ತಿಂದ್ಕೋತಾನೆ, ನಮಗೇನು ಎಂದು ಮೂಗು ಮುರೀಬೇಡಿ. ಇದು ಸಿನಿಮಾ ಪ್ರೇಮಿಗಳಿಗಾಗಿಯೇ ಮಾಡುತ್ತಿರುವ ಆಮ್ಲೆಟ್. ಇದನ್ನು ಸವಿಯಲು ನೀವು ಹೋಟೆಲ್‌ಗಲ್ಲ, ಚಿತ್ರಮಂದಿರಕ್ಕೆ ಹೋಗಬೇಕು.

ಹೌದು, ಸಂಯುಕ್ತಾ ಹೊರನಾಡು 'ಆಮ್ಲೆಟ್' ಎನ್ನುವ ಹೆಸರಿನ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಅಷ್ಟೇ ಅಲ್ಲ, ಈ ಚಿತ್ರದಲ್ಲಿ ಅವರು ಸಖತ್ ಹಾಟ್ ಆಗಿ ಕಾಣಿಸಿಕೊಳ್ಳುತ್ತಿದ್ದಾರಂತೆ ಎಂಬುದೂ ಗಾಂಧಿನಗರದ ಗಲ್ಲಿಗಳಲ್ಲಿ ಹರಿದಾಡಿ ಪಡ್ಡೆಗಳ ಮಂಡೆಬೆಚ್ಚಗಾಗಿಸಿದೆ. ವೆಂಕಟ್ ಭಾರದ್ವಾಜ್ ಎನ್ನುವವರು ಆಮ್ಲೆಟ್‌ನ ರೆಸಿಪಿಯ ಹೊಣೆ ಹೊತ್ತಿದ್ದಾರೆ. ಈ ಹಿಂದೆ 'ಡೇ ಇನ್ ದಿ ಸಿಟಿ', 'ಕೆಂಪಿರ್ವೆ'ಯಂಥ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದ ನಿರ್ದೇಶಕ ಅವರು.

ಈಗಾಗಲೇ ಈ ಚಿತ್ರದ ಚಿತ್ರೀಕರಣವೂ ಪ್ರಾರಂಭವಾಗಿದೆ. ವರ್ಷಾಂತ್ಯದೊಳಗೆ ಚಿತ್ರವನ್ನು ಪೂರ್ತಿಗೊಳಿಸಿ ಮುಂದಿನ ವರ್ಷದ ಆರಂಭದಲ್ಲಿ ಪ್ರೇಕ್ಷಕರ ಮುಂದಿಡುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ.

'ಆಮ್ಲೆಟ್'ನಲ್ಲಿ ಸಂಯುಕ್ತಾ ರೂಪದರ್ಶನದ ಜೊತೆ ನವೀನ್, ನಿರಂಜನ್ ದೇಶಪಾಂಡೆ, ಶೋಭರಾಜ್, ಶರ್ಮಿತಾ ಗೌಡ ಅವರ ನಟನೆಯ ರಸಾಸ್ವಾದವೂ ಇರಲಿದೆ. ಈಗಾಗಲೇ ಚಿತ್ರದಲ್ಲಿ ಸಂಯುಕ್ತಾ ಹೊರನಾಡು ಅವರ ಪಾತ್ರದ ಫಸ್ಟ್ ಲುಕ್ ಜಾಹೀರುಗೊಂಡಿದೆ. ಈ ಚಿತ್ರದಲ್ಲಿ ಅವರು ಕಾಣಿಸಿಕೊಂಡಿರುವ ರೀತಿಯೇ 'ಆಮ್ಲೆಟ್'ಗಾಗಿ ಪಡ್ಡೆಗಳು ಮನಸಲ್ಲೇ ಮಂಡಿಗೆ ತಿನ್ನುತ್ತ ಕಾಯುವ ಹಾಗಾಗಿದೆ.

# ರಿಷಿ ಮದುವೆ

ನಟ ರಿಷಿ ನಿಶ್ಚಿತಾರ್ಥ ಸ್ವಾತಿ ಎಂಬ ಚೆಲುವೆಯೊಟ್ಟಿಗೆ 'ಕವಲುದಾರಿ' ಸಿನಿಮಾ ಬಿಡುಗಡೆಯ ಸಮಯದಲ್ಲೇ ನಡೆದಿತ್ತು. ಈಗ ಅವರು ದಾಂಪತ್ಯದ ಹೊಸ್ತಿಲೊಳಗೆ ಅಡಿಯಿಡಲು ಸಜ್ಜಾಗಿದ್ದಾರೆ. ನವೆಂಬರ್ 10ರಂದು ಚೆನ್ನೈನಲ್ಲಿ ರಿಷಿ ಬದುಕಿನಲ್ಲಿ 'ಸ್ವಾತಿ'ಮುತ್ತು ಕಣ್ಣೊಡೆದು ಬೆಳಕು ಚೆಲ್ಲಲಿದೆ.

ಸ್ವಾತಿ ಹುಟ್ಟಿ ಬೆಳೆದಿದ್ದೆಲ್ಲ ಜಪಾನ್‌ನಲ್ಲಿ. ಈಗ ಅವರ ತಂದೆ ತಾಯಿ ಹೈದರಾಬಾದ್‌ನಲ್ಲಿ ನೆಲೆಸಿದ್ದಾರೆ. ಹಾಗಾಗಿ ರಿಷಿ ಮತ್ತು ಸ್ವಾತಿ ನಿಶ್ಚಿತಾರ್ಥ ಹೈದರಾಬಾದ್‌ನಲ್ಲೇ ನಡೆದಿತ್ತು. ಆದರೆ ಅವರ ಕುಟುಂಬದವರೆಲ್ಲ ಇರುವುದು ಚೆನ್ನೈನಲ್ಲಿ. ಹಾಗಾಗಿ ಮದುವೆ ನವೆಂಬರ್ 10ಕ್ಕೆ ಚೆನ್ನೈನಲ್ಲಿ ನಡೆಯಲಿದೆ. ಅಲ್ಲದೆ ಬೆಂಗಳೂರಿನಲ್ಲಿರುವ ಸ್ನೇಹಿತರು ಮತ್ತು ಬಂಧುಗಳಿಗಾಗಿ ನವೆಂಬರ್ 20ರಂದು ಬೆಂಗಳೂರಿನಲ್ಲೇ ರಿಸಿಪ್ಶನ್ ಕೂಡ ಏರ್ಪಾಡು ಮಾಡಲಾಗಿದೆ.

ಸ್ವಾತಿ ಬರಹಗಾರ್ತಿ. ರಿಷಿ ಈ ಹುಡುಗಿಯನ್ನು ಭೇಟಿಯಾಗಿದ್ದು ಬೆಂಗಳೂರಿನಲ್ಲಿಯೇ. ಸ್ನೇಹದಿಂದ ಆರಂಭವಾದ ಸಖ್ಯ ನಂತರ ಪ್ರೇಮವಾಗಿ ಅರಳಿದೆ. 'ನಾನು ನಟ. ಆಕೆ ಬರಹಗಾರ್ತಿ. ಇಬ್ಬರೂ ಸೃಜನಶೀಲತೆಯನ್ನು ನೆಚ್ಚಿಕೊಂಡವರು. ಈ ಕ್ರಿಯೇಟಿವಿಟಿಯೇ ನಮ್ಮನ್ನು ಒಂದುಗೂಡಿಸಿದೆ' ಎನ್ನುತ್ತಾರೆ ರಿಷಿ.

ರಿಷಿ ನಾಯಕನಟನಾಗಿ ನಟಿಸಿರುವ 'ಸಾರ್ವಜನಿಕರಿಗೆ ಸುವರ್ಣಾವಕಾಶ' ಸಿನಿಮಾ ಇನ್ನೇನು ಬಿಡುಗಡೆಗೆ ಸಜ್ಜಾಗಿದೆ. 'ಸಕಲಕಲಾ ವಲ್ಲಭ' ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. 'ರಾಮನ ಅವತಾರ' ಸಿನಿಮಾದ ಚಿತ್ರೀಕರಣ ನಡೆಯುತ್ತಿದ್ದು, ಮದುವೆಯ ಕಾರಣಕ್ಕಾಗಿಯೇ ಕೆಲವುದಿನಗಳ ಬ್ರೇಕ್ ತೆಗೆದುಕೊಂಡಿದ್ದಾರೆ.

